


ಮನೆ ಮನೆಗೆ ಗಂಗೆ
ಜಲ ಜೀವನ್ ಮಿಷನ್

Mandya Zilla Panchayat has been honored with the **NATIONAL AWARD** for outstanding work in **water conservation** under the **Jal Shakti Abhiyan.**

# ಸಕ್ಕರೆ ನಾಡಿಗೆ **ರಾಷ್ಟ್ರೀಯ ಪ್ರಶಸ್ತಿಯ ಸಿಹಿಕವಳ**

ಕರ್ನಾಟಕಕ್ಕೆ ಸಿಹಿಯ ರಸಕವಳವುಣಿಸುವ ಸಕ್ಕರೆ ನಾಡು ಮಂಡ್ಯ ಜಿಲ್ಲೆಯು, ನೂರಾರು ಪ್ರವಾಸಿ ತಾಣಗಳ ಗೂಡು. ಕಾವೇರಿ ಕಾಲುದಾರಿಯಲ್ಲಿ ಜಲರಾಶಿಯ ವೈಭವದ ನಡುವೆ ಹಸಿರ ಸಿರಿಯನ್ನು ಹೊದ್ದುಕೊಂಡು ನೈಸರ್ಗಿಕ ಸಂಪನ್ಮೂಲಗಳ ಆಗರವಾಗಿದೆ ಜಿಲ್ಲೆ ಬೆಳೆಯುತ್ತಿದೆ. 'ನೀರಿದ್ದರೆ ಊರು, ನಾರಿಯಿದ್ದರೆ ಮನೆ' ಎಂಬ ಹಿರಿಯರ ಮಾತಿನಂತೆ; ಜಿಲ್ಲೆಯ ಪ್ರಗತಿ ಮತ್ತು ಪ್ರಾಕೃತಿಕ ಶ್ರೀಮಂತಿಕೆಯಲ್ಲಿ ನೀರಿನ ಪಾತ್ರ ಮಹತ್ವದ್ದಾಗಿದೆ. ನೀರಿನ ಸಾಕಷ್ಟು ನೈಸರ್ಗಿಕ ಮೂಲಗಳು ಲಭ್ಯವಿದ್ದರೂ ಜಲಮೂಲಗಳ ಸಂರಕ್ಷಣೆಯಲ್ಲೂ ಜಿಲ್ಲೆ ದಿಟ್ಟ ಹೆಜ್ಜೆ ಇಟ್ಟಿದ್ದು , ರಾಷ್ಟ್ರ ಮಟ್ಟದ ಮನ್ನಣೆಗೆ ಪಾತ್ರವಾಗಿದೆ. ಇದು ಜಿಲ್ಲಾಡಳಿತ ಮಾತ್ರವಲ್ಲದೆ ಜಿಲ್ಲೆಯ ಜನರ ಸಂತಸವನ್ನು ಇಮ್ಮಡಿಗೊಳಿಸಿದೆ.

ದೇಶವ್ಯಾಪಿ ಜಲಶಕ್ತಿ ಅಭಿಯಾನದ ಅಂಗವಾಗಿ ಜಲ ಸಂರಕ್ಷಣೆ ಕಾಮಗಾರಿಗಳನ್ನು ಉತ್ತಮವಾಗಿ ಮತ್ತು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಕ್ಕಾಗಿ ಮಂಡ್ಯ ಜಿಲ್ಲಾ ಪಂಚಾಯಿತಿಯು ರಾಷ್ಟ್ರೀಯ ಪ್ರಶಸ್ತಿಯ ಗೌರವಕ್ಕೆ ಭಾಜನವಾಗಿದೆ. ಜಲಮೂಲಗಳ ಸಂರಕ್ಷಣೆ, ಅಂತರ್ಜಲ ವೃದ್ಧಿ , ಕೃಷಿ ಚಟುವಟಿಕೆಗಳಿಗೆ ಅಗತ್ಯ ಪ್ರಮಾಣದ ನೀರು ಪೂರೈಸುವ ಹಾಗೂ ನೀರಿನ ಸಮಸ್ಯೆ ನಿವಾರಿಸಲು ಕೈಗೆತ್ತಿಕೊಂಡ ಚಟುವಟಿಕೆಗಳನ್ನು ಯಶಸ್ವಿ ಮಾತ್ರವಲ್ಲದೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದಕ್ಕಾಗಿ ಈ ಪ್ರಶಸ್ತಿ ಸಂದಿದೆ. ಪ್ರಶಸ್ತಿ ಜೊತೆಗೆ 25 ಲಕ್ಷ ರೂಪಾಯಿ ನಗದು ಪುರಸ್ಕಾರವನ್ನೂ ಸಕ್ಕರೆ ನಾಡು ಪಡೆದುಕೊಂಡಿದೆ.

# ಮೈಸೂರು ವಿಭಾಗದಲ್ಲಿ ಮಂಡ್ಯಕ್ಕೆ ಪ್ರಥಮ ಸ್ಥಾನ

ಜಲಶಕ್ತಿ ಅಭಿಯಾನದ 'ಜಲ ಸಂಚಯ ಜನ ಭಾಗಿದಾರಿ' (JSJB) ಉಪಕ್ರಮದಲ್ಲಿ ಜಿಲ್ಲೆಯು ಜಲ ಸಂರಕ್ಷಣಾ ಕಾಮಗಾರಿಗಳ್ಳು ಉತ್ತಮವಾಗಿ ಅನುಷ್ಠಾನಗೊಳಿಸಿದ ಶ್ರೇಯಕ್ಕೆ ಪಾತ್ರವಾಗಿದೆ. ' ನೀರಿಗಾಗಿ ಒಂದಾಗಿ, ಪ್ರತಿ ಹನಿ ನೀರನ್ನು ಸಂರಕ್ಷಿಸಿ' ಎಂಬ ಧ್ಯೇಯವಾಕ್ಯದೊಂದಿಗೆ ಆರಂಭವಾದ ಅಭಿಯಾನವು; ಅಂತರ್ಜಲ ಮಟ್ಟ ಹೆಚ್ಚಿಸುವುದು, ಮಳೆ ನೀರು ಸಂಗ್ರಹಿಸುವುದು, ಜಲ ಸಂರಕ್ಷಣೆಯ ಸಂಸ್ಕೃತಿಯನ್ನು ಬೆಳೆಸುವುದು ಮತ್ತು ನೀರಿನ ಗುಣಮಟ್ಟ ಸುಧಾರಿಸುವುದು ಸೇರಿದಂತೆ ಹಲವು ಮಹತ್ವದ ಗುರಿಗಳನ್ನು ಹೊಂದಿದೆ. ಈ ಜಲಶಕ್ತಿ ಅಭಿಯಾನದಡಿ ವಿವಿಧ ರಾಜ್ಯಗಳನ್ನು 5 ವಲಯಗಳಾಗಿ ವಿಂಗಡಿಸಲಾಗಿತ್ತು. ಇದರಲ್ಲಿ ದಕ್ಷಿಣ ಭಾರತದ ಪ್ರಮುಖ ರಾಜ್ಯಗಳು ಕೂಡ ಇರುವ 3ನೇ ವಲಯದಲ್ಲಿ ಕರ್ನಾಟಕದ 7 ಜಿಲ್ಲೆಗಳಿಗೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಮೈಸೂರು ವಿಭಾಗದಲ್ಲಿ ಮಂಡ್ಯ ಜಿಲ್ಲೆಯು ಪ್ರಥಮ ಸ್ಥಾನ ಪಡೆದು ವಿಶೇಷ ಸಾಧನೆ ಮಾಡಿದೆ.

# ಸಕ್ಕರೆ ನಾಡಿನ ಸಾಧನೆಗಳೇನು?

**ಜಿಲ್ಲೆಯು 2024-25ರ ಹಣಕಾಸು ವರ್ಷದಲ್ಲಿ ಒಟ್ಟು**

# 7,192

**ಜಲಸಂರಕ್ಷಣೆ ಕಾಮಗಾರಿಗಳನ್ನು ಅಚ್ಚುಕಟ್ಟಾಗಿ ಪೂರ್ಣಗೊಳಿಸಿ ಜಲಸಂಚಯ ಪೋರ್ಟಲ್‌ನಲ್ಲಿ ದಾಖಲಿಸಿದೆ.**

ಕೆರೆ ಕಟ್ಟೆಗಳ ಸಮಗ್ರ ಅಭಿವೃದ್ಧಿ , ಕಲ್ಯಾಣಿಗಳ ಜೀರ್ಣೋದ್ಧಾರ, ಕೊಳವೆ ಬಾವಿಗಳ ಪುನಶ್ಚೇತನ, ಬದುಗಳ ನಿರ್ಮಾಣ, ಮಳೆ ನೀರು ಕೊಯ್ಲು , ನಾಲೆಗಳ ಹೂಳೆತ್ತುವುದು ಸೇರಿದಂತೆ ಚೆಕ್‌ಡ್ಯಾಮ್ ಕಾಮಗಾರಿಗಳನ್ನು ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಇದರೊಂದಿಗೆ ಜನಸಾಮಾನ್ಯರಿಗೆ ನೀರಿನ ಮಹತ್ವ ಹಾಗೂ ನೀರಿನ ಸಂರಕ್ಷಣೆ ಕುರಿತು ಅರಿವು ಮೂಡಿಸುವಲ್ಲಿ ಜಿಲ್ಲೆ ಮಾಡಿದ ಸಾಧನೆಯನ್ನು ಗಮನಿಸಿ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.



# ಜಲ ಶಕ್ತಿ ಅಭಿಯಾನ

ನೀರಿನ ಸಂರಕ್ಷಣೆ ಹಾಗೂ ಭೂಮಿಗೆ ಬೀಳುವ ವರ್ಷಧಾರೆ ವ್ಯರ್ಥವಾಗಿ ಹರಿಯುವ ಬದಲಿಗೆ ಅದನ್ನು ಸಂಗ್ರಹಿಸುವಂಥಾ ಚಟುವಟಿಕೆಗಳಲ್ಲಿ ಸಮುದಾಯದ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು ಜಲಶಕ್ತಿ ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ನೀರಿನ ಕೊರತೆ ನಿವಾರಣೆ ಹಾಗೂ ಭವಿಷ್ಯದ ದೃಷ್ಟಿಯಿಂದ ಹರಿಯುವ ನೀರನ್ನು ತಡೆದು ಹಿಡಿದಿಟ್ಟುಕೊಳ್ಳುವುದು, ಇಂಗಿಸುವುದು, ಜಲಮೂಲ ಮತ್ತು ಜಲ ಸಂಪನ್ಮೂಲಗಳ ಸಂರಕ್ಷಣೆ, ಮರುಸ್ಥಾಪನೆ ಹಾಗೂ ಮರುಬಳಕೆಗೆ ಜನರನ್ನು ಉತ್ತೇಜಿಸುವುದು ಈ ಅಭಿಯಾನದ ಉದ್ದೇಶವಾಗಿದೆ. ಒಟ್ಟಾರೆಯಾಗಿ ನೀರಿನ ಸಂಗ್ರಹಣೆ ಹೆಚ್ಚಿಸುವುದು ಅಭಿಯಾನದ ಪ್ರಮುಖಾಂಶ.

***ಮಂಡ್ಯಕ್ಕೆ ದೊರೆತ ರಾಷ್ಟ್ರ ಪ್ರಶಸ್ತಿಯಿಂದ ಜಿಲ್ಲೆ ಮಾತ್ರವಲ್ಲದೆ ರಾಜ್ಯದ ಪ್ರತಿಷ್ಠೆಯೂ ಹೆಚ್ಚಿದೆ. ಅಲ್ಲದೆ ಜಲಮೂಲಗಳ ಸಂರಕ್ಷಣೆಗಾಗಿ ವಿವಿಧ ಜಿಲ್ಲೆಗಳು ಇನ್ನಷ್ಟು ಶ್ರಮ ವಹಿಸುವಂತಾಗಲು ಸಕ್ಕರೆ ನಾಡು ಸ್ಫೂರ್ತಿಯಾಗಿದೆ.***